# ಕರ್ನಾಟಕ ಸರ್ಕಾರದ ನಡವಳಿ

**ವಿಷಯ:** ಕೊಡಗು ಜಿಲ್ಲೆ, ಸೋಮವಾರಪೇಟೆ ತಾಲ್ಲೂಕು, ಬ್ಯಾಡಗೊಟ್ಟ ಗ್ರಾಮ ಪಂಚಾಯತಿ ಅಧ್ಯಕ್ಷರಾದ ಶ್ರೀಮತಿ ನಿರ್ಮಲ ಸುಂದರ್ ಹಾಗೂ ಉಪಾಧ್ಯಕ್ಷರಾದ ಶ್ರೀ ಅಹಮದ್ ಬಿ.ಎ. ರವರ ವಿರುದ್ಧ ಎಸಿಬಿ ವರದಿಯನ್ವಯ ಕ್ರಮ ಕೈಗೊಳ್ಳುವ ಕುರಿತು– ಆದೇಶ

**ಓದಲಾಗಿದೆ:**

1. ಪೋಲೀಸ್ ಅಧೀಕ್ಷಕರು (ಕೇಂದ್ರ ಸ್ಥಾನ), ಭ್ರಷ್ಟಾಚಾರ ನಿಗ್ರಹ ದಳ, ಬೆಂಗಳೂರು ರವರ ಪತ್ರ ಸಂಖ್ಯೆ ಎಸಿಬಿ/ಕೇಂ.ಕ./ ಕೊಡಗು/ಮೊ.ಸಂ. 02/2018, ದಿನಾಂಕ 10.08.2018.
2. ಸರ್ಕಾರದ ಸಮಸಂಖ್ಯೆಯ ದಿನಾಂಕ: 10.10.2018 ರ ಕಾರಣ ಕೇಳುವ ನೋಟೀಸ್.
3. ಶ್ರೀಮತಿ ನಿರ್ಮಲ ಸುಂದರ್, ಅಧ್ಯಕ್ಷರು, ಬ್ಯಾಡಗೊಟ್ಟ ಗ್ರಾಮ ಪಂಚಾಯತಿ, ಸೋಮವಾರಪೇಟೆ ತಾಲ್ಲೂಕು, ಕೊಡಗು ಜಿಲ್ಲೆ ಇವರು ಕಾರಣ ಕೇಳುವ ನೋಟೀಸಿಗೆ ನೀಡಿರುವ ಲಿಖಿತ ಹೇಳಿಕೆ, ದಿನಾಂಕ: 27.10.2018.
4. ಶ್ರೀ ಅಹಮದ್ ಬಿ.ಎ., ಉಪಾಧ್ಯಕ್ಷರು, ಬ್ಯಾಡಗೊಟ್ಟ ಗ್ರಾಮ ಪಂಚಾಯತಿ, ಸೋಮವಾರಪೇಟೆ ತಾಲ್ಲೂಕು, ಕೊಡಗು ಜಿಲ್ಲೆ ಇವರು ಕಾರಣ ಕೇಳುವ ನೋಟೀಸಿಗೆ ನೀಡಿರುವ ಲಿಖಿತ ಹೇಳಿಕೆ, ದಿನಾಂಕ: 27.10.2018.
5. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಕೊಡಗು ಜಿಲ್ಲಾ ಪಂಚಾಯತಿ ಇವರ ಪತ್ರ ಸಂಖ್ಯೆ ಕೊ.ಜಿಪಂ/ಸ.ಶಾ./ಬ್ಯಾಡಗೊಟ್ಟ/ಅಉಸಅಶಿ–1/2018–19, ದಿನಾಂಕ: 27.11.2018
6. ಇದೇ ಸಮಸಂಖ್ಯೆಯ ವಿಚಾರಣಾ ನೋಟೀಸಿನ ದಿನಾಂಕ: 05.01.2019. ವಿಚಾರಣೆ ನಡೆದ ದಿನಾಂಕ: 11.01.2019.

**ಪ್ರಸ್ತಾವನೆ :**

ಮೇಲೆ ಓದಲಾದ ಕ್ರಮ ಸಂಖ್ಯೆ (1) ರಲ್ಲಿ ಕೊಡಗು ಜಿಲ್ಲೆ, ಸೋಮವಾರಪೇಟೆ ತಾಲ್ಲೂಕು, ಬ್ಯಾಡಗೊಟ್ಟ ಗ್ರಾಮ ಪಂಚಾಯತಿ ಅಧ್ಯಕ್ಷರಾದ ಶ್ರೀಮತಿ ನಿರ್ಮಲ ಸುಂದರ್ ಹಾಗೂ ಉಪಾಧ್ಯಕ್ಷರಾದ ಶ್ರೀ ಅಹಮದ್ ಬಿ.ಎ. ರವರುಗಳು ಬಸವ ವಸತಿ ಯೋಜನೆಯಡಿ ಮನೆ ಮಂಜೂರು ಮಾಡಲು ಶ್ರೀ ಚಂದ್ರಶೇಖರ ಹೆಚ್.ಎಂ. ರವರಿಂದ ಲಂಚದ ಹಣ ರೂ. 5,000/– ಗಳನ್ನು ಪಡೆಯುವಾಗ ಎಸಿಬಿ ಪೋಲೀಸ್ ಟ್ರಾಪ್ ಕಾರ್ಯಾಚರಣೆಯಲ್ಲಿ ಸಿಕ್ಕಿಬಿದ್ದಿದ್ದು, ಸದರಿ ಆರೋಪಿತ ಚುನಾಯಿತ ಪ್ರತಿನಿಧಿಗಳನ್ನು ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ 1993 ರ ಕಲಂ 43(ಎ) ರಂತೆ ಅಧ್ಯಕ್ಷ ಮತ್ತು ಸದಸ್ಯ ಸ್ಥಾನದಿಂದ ತೆಗೆದುಹಾಕುವಂತೆ ಪೋಲೀಸ್ ಅಧೀಕ್ಷಕರು(ಕೇಂದ್ರ ಸ್ಥಾನ), ಭ್ರಷ್ಟಾಚಾರ ನಿಗ್ರಹ ದಳ, ಬೆಂಗಳೂರು ರವರು ಕೋರಿದ್ದರು.

ಮೇಲೆ ಓದಲಾದ ಕ್ರಮ ಸಂಖ್ಯೆ (2) ರಲ್ಲಿ ಕೊಡಗು ಜಿಲ್ಲೆ, ಸೋಮವಾರಪೇಟೆ ತಾಲ್ಲೂಕು, ಬ್ಯಾಡಗೊಟ್ಟ ಗ್ರಾಮ ಪಂಚಾಯತಿ ಅಧ್ಯಕ್ಷರಾದ ಶ್ರೀಮತಿ ನಿರ್ಮಲ ಸುಂದರ್ ಹಾಗೂ ಉಪಾಧ್ಯಕ್ಷರಾದ ಶ್ರೀ ಅಹಮದ್ ಬಿ.ಎ. ರವರಿಗೆ ನಿಯಮಾನುಸಾರ ಕಾರಣ ಕೇಳುವ ನೋಟೀಸ್ ಜಾರಿಗೊಳಿಸಲಾಗಿರುತ್ತದೆ.

ಮೇಲೆ ಓದಲಾದ ಕ್ರಮ ಸಂಖ್ಯೆ (3) ರಲ್ಲಿ ಶ್ರೀಮತಿ ನಿರ್ಮಲ ಸುಂದರ್, ಅಧ್ಯಕ್ಷರು, ಬ್ಯಾಡಗೊಟ್ಟ ಗ್ರಾಮ ಪಂಚಾಯತಿ ಕಾರಣ ಕೇಳುವ ನೋಟೀಸಿಗೆ ಈ ಕೆಳಕಂಡಂತೆ ಉತ್ತರಿಸಿದ್ದಾರೆ.

ತಾನು ಜೂನ್ ತಿಂಗಳ 2015 ರಲ್ಲಿ ಬ್ಯಾಡಗೊಟ್ಟ ಗ್ರಾಮ ಪಂಚಾಯತಿ ಅಧ್ಯಕ್ಷರಾಗಿ ಆಯ್ಕೆಯಾಗಿದ್ದು ಇದುವರೆಗೂ ಯಾವುದೇ ಭ್ರಷ್ಟಾಚಾರ ಮಾಡದೇ ಯಾವುದೇ ಲೋಪ ಎಸಗದೆ ನಿಷ್ಠೆಯಿಂದ, ಪ್ರಾಮಾಣಿಕತೆಯಿಂದ ಕರ್ತವ್ಯ ನಿರ್ವಹಿಸಿರುತ್ತೇನೆ. ತಾನು ಹಲವಾರು ಸಂಘ ಸಂಸ್ಥೆಗಳಲ್ಲಿ ಅಧ್ಯಕ್ಷರಾಗಿ ಕಾರ್ಯನಿರ್ವಹಿಸಿ ಜನ ಮೆಚ್ಚುಗೆಗೆ ಪಾತ್ರವಾಗಿರುತ್ತೇನೆ. ತನ್ನ ಗ್ರಾಮದವರಾದ ಪ್ರೇಮ ಸುರೇಶ್ ರವರು ಧರ್ಮಸ್ಥಳ ಸಂಘದ ಸದಸ್ಯರಾಗಿದ್ದು, ಹಲವಾರು ತಿಂಗಳುಗಳಿಂದ ಹಣ ಪಾವತಿಸಿರಲಿಲ್ಲ. ಸುರೇಶ್ ಮತ್ತು ಚಂದ್ರಶೇಖರ್ ರವರು ಸ್ನೇಹಿತರಾಗಿದ್ದು, ಸದರಿ ದಿನದಂದು ಚಂದ್ರಶೇಖರ್ ರವರು, ಸುರೇಶ್ ರವರ ಪತ್ನಿಯ ಬಾಕಿ ಹಣದ ಬಾಬ್ತು ಎಂದು 5 ಸಾವಿರ ರೂಗಳನ್ನು ನೀಡಿದ್ದು, ಪ್ರೇಮ ಸುರೇಶ್ ರವರು ಕೊಡಬೇಕಾಗಿದ್ದ ಬಾಕಿ ಹಣ ಇರಬಹುದೆಂದು ಭಾವಿಸಿ ಚಂದ್ರಶೇಖರ್ ನೀಡಿದ ಹಣವನ್ನು ಸ್ವೀಕರಿಸಿರುತ್ತೇನೆಯೇ ವಿನಃ ತಾನು ಯಾವುದೇ ಲಂಚಕ್ಕೆ ಬೇಡಿಕೆ ಇಟ್ಟಿರುವುದಿಲ್ಲ ಮತ್ತು ಸ್ವೀಕರಿಸಿರುವುದಿಲ್ಲ ಎಂದು ಉತ್ತರ ನೀಡಿದ್ದಾರೆ.

ಮೇಲೆ ಓದಲಾದ ಕ್ರಮ ಸಂಖ್ಯೆ (4) ರಲ್ಲಿ ಶ್ರೀ ಅಹಮದ್ ಬಿ.ಎ., ಉಪಾಧ್ಯಕ್ಷರು, ಬ್ಯಾಡಗೊಟ್ಟ ಗ್ರಾಮ ಪಂಚಾಯತಿ ಕಾರಣ ಕೇಳುವ ನೋಟೀಸಿಗೆ ಈ ಕೆಳಕಂಡಂತೆ ಉತ್ತರಿಸಿದ್ದಾರೆ.

ಶ್ರೀ ಚಂದ್ರಶೇಖರ್ ಹೆಚ್. ಎಂ. ರವರಿಂದ ರೂ. 5000/- ಗಳನ್ನು ತಾನು ಪಡೆದಿರುವುದಿಲ್ಲ. ತನ್ನ ಮನೆಗೆ ಚಂದ್ರಶೇಖರ್ ಬಂದಿರುವುದಿಲ್ಲ. ಹಾಗೂ ಎಸಿಬಿ ಟ್ರಾಪ್ ತನ್ನ ಮನೆಯಲ್ಲಿ ನಡೆದಿರುವುದಿಲ್ಲ. ತಾನು ಸುಮಾರು 6 ಗಂಟೆ ಸಮಯದಲ್ಲಿ ಮನೆಯಲ್ಲಿದ್ದ ಸಂದರ್ಭದಲ್ಲಿ ಯಾರೋ 3 ಜನ ತಂಡವು ನನ್ನನ್ನು ಡಿವೈಎಸ್‌ಪಿ ರವರು ಗ್ರಾಮ ಪಂಚಾಯತಿಗೆ ಬರಲು ಹೇಳಿದ್ದಾರೆ ಎಂದು ಕರೆದಿದ್ದು, ಅದರಂತೆ ತಾನು ಗ್ರಾಮ ಪಂಚಾಯತಿಗೆ ಹಾಜರಾಗಿರುತ್ತೇನೆ. ಸದರಿ ವಿಚಾರವಾಗಿ ತಾವು ಗ್ರಾಮ ಪಂಚಾಯತಿ ಸಿಬ್ಬಂದಿಗಳನ್ನು ಹಾಗೂ ಫಲಾನುಭವಿಗಳನ್ನು ವಿಚಾರಣೆ ನಡೆಸಿದರೆ ಸತ್ಯಾಂಶವು ತಿಳಿಯುತ್ತದೆ. ಎಸಿಬಿ ಅಧಿಕಾರಿಗಳು ತನ್ನ ಮೇಲೆ ಮಾಡಿರುವ ಆರೋಪವು ಸತ್ಯಕ್ಕೆ ದೂರವಾಗಿರುತ್ತದೆ. ಗ್ರಾಮ ಪಂಚಾಯತಿಯ ಸಹ ಸದಸ್ಯರಾದ ರೇಣುಕಾ ಮೇದಪ್ಪ ಮತ್ತು ದಿನೇಶ್ ರವರ ಒತ್ತಾಯದ ಮೇರೆಗೆ ಈ ರೀತಿಯ ಆರೋಪಗಳನ್ನು ಮಾಡಿರುತ್ತಾರೆ. ಕಳೆದ 3 ವರ್ಷದ ಅಧಿಕಾರದ ಅವಧಿಯಲ್ಲಿ ತಾನು ಯಾವುದೇ ಫಲಾನುಭವಿಯಿಂದ ಹಣ ಪಡೆದಿಲ್ಲ. ಅಲ್ಲದೆ ಮೇಲ್ಕಂಡ 2 ಸದಸ್ಯರನ್ನು ಬಿಟ್ಟು ಬಾಕಿ ಉಳಿದ 6 ಜನ ಸಹ ಸದಸ್ಯರನ್ನು ಈ ವಿಷಯದಲ್ಲಿ ವಿಚಾರಣೆ ನಡೆಸಿದರೆ ಸತ್ಯಾಂಶ ತಿಳಿಯುತ್ತದೆ ಎಂದು ಉತ್ತರ ನೀಡಿದ್ದಾರೆ.

ಮೇಲೆ ಓದಲಾದ (5) ರಲ್ಲಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಕೊಡಗು ಜಿಲ್ಲಾ ಪಂಚಾಯತಿ ರವರು ಬ್ಯಾಡಗೊಟ್ಟ ಗ್ರಾಮ ಪಂಚಾಯತಿ ಅಧ್ಯಕ್ಷರು ಮತ್ತು ಉಪಾಧ್ಯಕ್ಷರು ಅವರ ಕರ್ತವ್ಯ ನಿರ್ವಹಣೆಯಲ್ಲಿ ದುರ್ನಡತೆಯ ತಪ್ಪಿತಸ್ಥರಾಗಿರುವುದಕ್ಕಾಗಿ, ಸದರಿಯವರುಗಳನ್ನು ಗ್ರಾಮ ಪಂಚಾಯತಿ ಅಧ್ಯಕ್ಷ ಮತ್ತು ಉಪಾಧ್ಯಕ್ಷ ಹುದ್ದೆಯಿಂದ ಹಾಗೂ ಗ್ರಾಮ ಪಂಚಾಯತಿ ಸದಸ್ಯತ್ವದಿಂದ ತೆಗೆದು ಹಾಕಬಹುದೆಂದು ಶಿಫಾರಸ್ಸು ಮಾಡಿದ್ದಾರೆ.

ಪ್ರಕರಣವನ್ನು ವಿವರವಾಗಿ ಪರಿಶೀಲಿಸಲಾಗಿದೆ. ಶ್ರೀಮತಿ ವಿಜಯಲಕ್ಷ್ಮಿ ಕೋಂ ಶ್ರೀ ಚಂದ್ರಶೇಖರ್ ಇವರ ಗ್ರಾಮ ಪಂಚಾಯತಿಯಿಂದ ಬಸವ ವಸತಿ ಯೋಜನೆಯಡಿ ಮನೆ ಮಂಜೂರು ಮಾಡುವಂತೆ ದಿನಾಂಕ 08.03.2018 ರಂದು ನಡೆದ ಬ್ಯಾಡಗೊಟ್ಟ ಗ್ರಾಮ ಪಂಚಾಯತಿಯ ಗ್ರಾಮ ಸಭೆಯಲ್ಲಿ ಅರ್ಜಿ ಸಲ್ಲಿಸಿದ್ದು, ಗ್ರಾಮ ಪಂಚಾಯತಿ ಅಧ್ಯಕ್ಷರಾದ ಅದ್ಯಕ್ಷರಾದ ಶ್ರೀಮತಿ ನಿರ್ಮಲ ಸುಂದರ್ ಹಾಗೂ ಉಪಾಧ್ಯಕ್ಷರಾದ ಶ್ರೀ ಅಹಮದ್ ಬಿ.ಎ. ರವರುಗಳು ಪಂಚಾಯತಿಗೆ ಮಂಜೂರಾಗಿರುವ ಒಟ್ಟು 36 ಮನೆಗಳಿಗೂ ತಲಾ ರೂ. 5,000/- ಗಳಂತೆ ಒಟ್ಟು ರೂ. 1,80,000/- ಗಳನ್ನು ಕೊಡಬೇಕೆಂದು ಬೇಡಿಕೆ ಇಟ್ಟಿದ್ದು, ರೂ. 5,000/- ತಂದು ಕೊಟ್ಟರೆ ಮಾತ್ರ ಶ್ರೀಮತಿ ವಿಜಯಲಕ್ಷ್ಮಿಯವರ ಹೆಸರಿನಲ್ಲಿ ಕಂಪ್ಯೂಟರ್‌ಗೆ ಅಪ್‌ಡೇಟ್ ಮಾಡುತ್ತೇವೆ ಇಲ್ಲದಿದ್ದರೆ ಸದರಿಯವರ ಹೆಸರಿನ ಬದಲು ಬೇರೆಯವರ ಹೆಸರನ್ನು ಸೇರಿಸುತ್ತೇವೆ ಎಂದು ಲಂಚದ ಹಣಕ್ಕೆ ಒತ್ತಾಯಿಸಿರುತ್ತಾರೆಂದು ನೀಡಿದ ದೂರಿನಂತೆ ಪೊಲೀಸ್ ನಿರೀಕ್ಷಕರು, ಭ್ರಷ್ಟಾಚಾರ ನಿಗ್ರಹ ಪೊಲೀಸ್ ಠಾಣೆ, ಮಡಿಕೇರಿ ಇವರು ಮಡಿಕೇರಿ ಭ್ರಷ್ಟಾಚಾರ ನಿಗ್ರಹ ದಳ ಪೊಲೀಸ್ ಠಾಣೆ ಮೊಕದಮ್ಮೆ ಸಂಖ್ಯೆ: 02/2018 ಕಲಂ 7, 13(1)(ಡಿ)ರೆ/ವಿ 13(2) ಪಿ.ಸಿ. ಕಾಯ್ದೆ 1998 ರಂತೆ ಪ್ರಕರಣ ದಾಖಲಿಸಿ ದಿನಾಂಕ 06.07.2018 ರಂದು ಬ್ಯಾಡಗೊಟ್ಟ ಗ್ರಾಮ ಪಂಚಾಯತಿ ಅಧ್ಯಕ್ಷರಾದ ಶ್ರೀಮತಿ ನಿರ್ಮಲ ಸುಂದರ್, ಊರುಗುತ್ತಿ ಗ್ರಾಮ, ಕೊಡ್ಲಿಪೇಟೆ ಅಂಚೆ ಇವರ ಪಿರ್ಯಾದಿಯಿಂದ ಲಂಚದ ಹಣವನ್ನು ಒತ್ತಾಯಿಸಿ ಪಡೆಯುವಾಗ ಟ್ರ್ಯಾಪ್ ಮಾಡಿ ದಸ್ತಗಿರಿ ಮಾಡಲಾಗಿರುತ್ತದೆ. ಮತ್ತು ಲಂಚದ ಹಣಕ್ಕೆ ಬೇಡಿಕೆ ಇಟ್ಟಿದ್ದ ಉಪಾಧ್ಯಕ್ಷರಾದ ಶ್ರೀ ಬಿ.ಎ. ಅಹಮ್ಮದ್, ಬ್ಯಾಡಗೊಟ್ಟ ಗ್ರಾಮ, ಕೊಡ್ಲಿಪೇಟೆ ಇವರನ್ನು ಕೂಡ ದಸ್ತಗಿರಿ ಮಾಡಲಾಗಿದ್ದು, ಪ್ರಕರಣ ತನಿಖೆಯಲ್ಲಿರುತ್ತದೆ.

ಬ್ಯಾಡಗೊಟ್ಟ ಗ್ರಾಮ ಪಂಚಾಯತಿ ಅದ್ಯಕ್ಷರಾದ ಶ್ರೀಮತಿ ನಿರ್ಮಲ ಸುಂದರ್ ಹಾಗೂ ಉಪಾಧ್ಯಕ್ಷರಾದ ಶ್ರೀ ಅಹಮದ್ ಬಿ.ಎ. ರವರುಗಳು ಗ್ರಾಮ ಪಂಚಾಯತಿ ಮೂಲಕ ಅನುಷ್ಠಾನ ಮಾಡುವ ವಸತಿ ಯೋಜನೆಯ ಅನುಷ್ಠಾನದಲ್ಲಿ, ಭ್ರಷ್ಟಾಚಾರದಲ್ಲಿ ಭಾಗಿಯಾಗಿ ಶ್ರೀ ಚಂದ್ರಶೇಖರ ಹೆಚ್.ಎಂ. ರವರಿಂದ ಲಂಚದ ಹಣ ರೂ. 5,000/- ಗಳನ್ನು ಪಡೆಯುವಾಗ ಎಸಿಬಿ ಪೊಲೀಸ್ ಟ್ರಾಪ್ ಕಾರ್ಯಾಚರಣೆಯಲ್ಲಿ ಸಿಕ್ಕಿಬಿದ್ದಿದ್ದು, ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ 1993ರ ಪ್ರಕರಣ 43(ಎ)(1)(i) ರನ್ವಯ ದುರ್ನಡತೆ ಅಥವಾ ತಲೆತಗ್ಗಿಸುವಂಥ ನಡತೆಯಾಗಿರುತ್ತದೆ.

ಮೇಲ್ಕಂಡ ಕಾರಣಗಳ ಹಿನ್ನೆಲೆಯಲ್ಲಿ ಬ್ಯಾಡಗೊಟ್ಟ ಗ್ರಾಮ ಪಂಚಾಯತಿ ಅದ್ಯಕ್ಷರಾದ ಶ್ರೀಮತಿ ನಿರ್ಮಲ ಸುಂದರ್ ಹಾಗೂ ಉಪಾಧ್ಯಕ್ಷರಾದ ಶ್ರೀ ಅಹಮದ್ ಬಿ.ಎ. ರವರುಗಳು ಅವರ ಕರ್ತವ್ಯ ನಿರ್ವಹಣೆಯಲ್ಲಿ ದುರ್ನಡತೆ ಎಸಗಿ ತಪ್ಪಿತಸ್ಥರಾಗಿರುವುದರಿಂದ ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ 43(ಎ)(1)(i) ಮತ್ತು 48(4) ರನ್ವಯ ಶ್ರೀಮತಿ ನಿರ್ಮಲ ಸುಂದರ್ ರವರನ್ನು ಗ್ರಾಮ ಪಂಚಾಯತಿ ಸದಸ್ಯತ್ವ ಸ್ಥಾನ ಹಾಗೂ ಅಧ್ಯಕ್ಷ ಸ್ಥಾನದಿಂದ ಮತ್ತು ಶ್ರೀ ಅಹಮದ್ ಬಿ.ಎ. ರವರನ್ನು ಗ್ರಾಮ ಪಂಚಾಯತಿ ಸದಸ್ಯತ್ವ ಸ್ಥಾನ ಹಾಗೂ ಉಪಾಧ್ಯಕ್ಷ ಸ್ಥಾನದಿಂದ ತೆಗೆದು ತೆಗೆದುಹಾಕಲು ನಿರ್ಣಯಿಸಿದೆ. ಅದರಂತೆ ಈ ಕೆಳಕಂಡ ಆದೇಶ.

**ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ/841/ಗ್ರಾಪಂಅ/2018 ಬೆಂಗಳೂರು, ದಿನಾಂಕ: 12.03.2019 .**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ಕರ್ನಾಟಕ ಗ್ರಾಮ ಸ್ವರಾಜ್ ಮತು ಪಂಚಾಯತ್ ರಾಜ್ ಅಧಿನಿಯಮ, 1993 ರ ಪ್ರಕರಣ 43(ಎ)(1)(i) ಮತ್ತು 48(4) ರನ್ವಯ ಸರ್ಕಾರವು ಶ್ರೀಮತಿ ನಿರ್ಮಲ ಸುಂದರ್ ಅಧ್ಯಕ್ಷರು, ಬ್ಯಾಡಗೊಟ್ಟ ಗ್ರಾಮ ಪಂಚಾಯತಿ, ಸೋಮವಾರಪೇಟೆ ತಾಲ್ಲೂಕು, ಕೊಡಗು ಜಿಲ್ಲೆ ರವರನ್ನು ಬ್ಯಾಡಗೊಟ್ಟ ಗ್ರಾಮ ಪಂಚಾಯತಿಯ ಸದಸ್ಯತ್ವ ಹಾಗೂ ಅಧ್ಯಕ್ಷ ಸ್ಥಾನದಿಂದ ಮತ್ತು ಶ್ರೀ ಅಹಮದ್ ಬಿ.ಎ., ಉಪಾಧ್ಯಕ್ಷರು, ಬ್ಯಾಡಗೊಟ್ಟ ಗ್ರಾಮ ಪಂಚಾಯತಿ, ಸೋಮವಾರಪೇಟೆ ತಾಲ್ಲೂಕು, ಕೊಡಗು ಜಿಲ್ಲೆ ರವರನ್ನು ಸದಸ್ಯತ್ವ ಹಾಗೂ ಉಪಾಧ್ಯಕ್ಷ ಸ್ಥಾನದಿಂದ ತಕ್ಷಣದಿಂದ ಜಾರಿಗೆ ಬರುವಂತೆ ತೆಗೆದುಹಾಕಿ ಆದೇಶಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

14/3/19

**(ಮುಬಾರಕ್ ಅಹ್ಮದ್)**
ಉಪನಿರ್ದೇಶಕರು ಹಾಗೂ ಪದನಿಮಿತ್ತ
ಸರ್ಕಾರದ ಅಧೀನ ಕಾರ್ಯದರ್ಶಿ,
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ.

**ಪ್ರತಿಗಳು:**

1) ಜಿಲ್ಲಾಧಿಕಾರಿಗಳು, ಕೊಡಗು ಜಿಲ್ಲೆ.
2) ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತಿ, ಕೊಡಗು ಜಿಲ್ಲೆ,
3) ಕಾರ್ಯನಿರ್ವಾಹಕ ಅಧಿಕಾರಿ, ತಾಲ್ಲೂಕು ಪಂಚಾಯತಿ, ಸೋಮವಾರಪೇಟೆ ತಾಲ್ಲೂಕು, ಕೊಡಗು ಜಿಲ್ಲೆ.
4) ಶ್ರೀಮತಿ ನಿರ್ಮಲ ಸುಂದರ್ ಅಧ್ಯಕ್ಷರು, ಬ್ಯಾಡಗೊಟ್ಟ ಗ್ರಾಮ ಪಂಚಾಯತಿ, ಸೋಮವಾರಪೇಟೆ ತಾಲ್ಲೂಕು, ಕೊಡಗು ಜಿಲ್ಲೆ.
5) ಶ್ರೀ ಅಹಮದ್ ಬಿ.ಎ., ಉಪಾಧ್ಯಕ್ಷರು, ಬ್ಯಾಡಗೊಟ್ಟ ಗ್ರಾಮ ಪಂಚಾಯತಿ, ಸೋಮವಾರಪೇಟೆ ತಾಲ್ಲೂಕು, ಕೊಡಗು ಜಿಲ್ಲೆ
6) ಪಂಚಾಯತಿ ಅಭಿವೃದ್ಧಿ ಅಧಿಕಾರಿ, ಬ್ಯಾಡಗೊಟ್ಟ ಗ್ರಾಮ ಪಂಚಾಯತಿ, ಸೋಮವಾರಪೇಟೆ ತಾಲ್ಲೂಕು, ಕೊಡಗು ಜಿಲ್ಲೆ
7) ಗಣಕ ಕೋಶ – ಇಲಾಖಾ ವೆಬ್ ಸೈಟ್ ನಲ್ಲಿ ಪ್ರಕಟಿಸಲು.
8) ಶಾಖಾ ರಕ್ಷಾ ಕಡತ / ಹೆಚ್ಚುವರಿ ಪ್ರತಿಗಳು.